ರಸ್ತೆಗಿಳಿದಿವೆ. ಅವೆಲ್ಲ ಒಬ್ಬರ ಆಧಾರದಲ್ಲಿ ಇನ್ನೊಬ್ಬರು ಬದುಕಬೇಕು ಎಂಬ ತತ್ತ್ವವುಳ್ಳವು. ಸೈಕಲ್ಲು ಹಾಗಲ್ಲ. ದಿಬ್ಬ ಬಂದರೆ ಹಿಂದೆ ಕೂತವರೂ ಕಾಲುಚಾಚಿ ಪೆಡಲು ತುಳಿಯಬಹುದು; ಇಳಿದು ನೂಕಬಹುದು. ನಾವು ಹೊಸಪೇಟೆಗೆ ಬಂದ ಹೊಸತರಲ್ಲಿ, ತಿಟ್ಟು ಬಂದಾಗ ಸೈಕಲ್ ರಿಕ್ಷಾದವನಿಗೆ ಸುಲಭವಾಗಲೆಂದು ಇಳಿದು, ಇಳಿಜಾರು ಬಂದ ಬಳಿಕ ಮತ್ತೆ ಹತ್ತುತ್ತಿದ್ದೆವು. ಸೈಕಲ್ ವಿನ್ಯಾಸಕರಿಗೆ ಅದು ಭಾರ ಎಳೆಯುವ ಬಂಡಿ ಮಾತ್ರವಲ್ಲ, ಕೂತ ಜೀವಗಳು ಸಾಮೀಪ್ಯಸುಖ ಅನುಭವಿಸುವ ರಥವೂ ಆಗಬೇಕು ಎಂಬ ಇರಾದೆ ಇದ್ದಿರಬೇಕು. ಅದು ಪ್ರಿಯಜೀವಗಳಿಗೆ ಅಪೂರ್ವ ಸಾಮಿಪ್ಯ ಒದಗಿಸುವುದನ್ನು ಬಾರ್ ರೈಡಿಂಗ್ ಮಾಡಿದವರೇ ಬಲ್ಲರು. ಬಾರಿನ ಮೇಲೆ ಕೂತವರ ಕೆನ್ನೆ, ಕಿವಿ, ಮುಂಗುರುಳು ಚಾಲಕರ ಮುಖದ ಸನಿಹಕ್ಕೆ ಬರುತ್ತವೆ; ಅವರ ಬಿಸಿಯುಸಿರು ಕೂತವರ ಕೆನ್ನೆಗೆ ತಾಗಿ ಅದನ್ನು ಕೆಂಪಾಗಿಸುತ್ತದೆ. 'ಬೆಂಕಿಯ ಬಲೆ' ಚಿತ್ರವು ವಾರಗಟ್ಟಲೆ ಓಡಿದ್ದು ನಾಯಕ ನಾಯಕಿಯರ ಅಭಿನಯದಿಂದಲ್ಲ; 'ನಿನ್ನ ನಗುವು ಹೂವಂತೆ' ಹಾಡಿನಿಂದಲೂ ಅಲ್ಲ. ಸೈಕಲ್ ಸವಾರಿ ದೃಶ್ಯದಿಂದ. ಸಿನಿಮಾ ನೋಡಿದ ಪ್ರೇಕ್ಷಕರೆಲ್ಲ ಸೈಕಲ್ ಕೊಂಡರು. ಸಿಡಿಯಲು ಸಿದ್ಧವಾಗಿದ್ದ ದಾಂಪತ್ಯಪ್ರೇಮಗಳು ಹಳಿಯ ಮೇಲೆ ಬಂದವು; ಹೆದ್ದರೆಗಳಲ್ಲಿ ಹೊಯ್ದಾಡುತ್ತಿದ್ದ ನಾವೆಗಳು ಸುಖವಾಗಿ ದಡ ತಲುಪಿದವು. ಪಿ. ಲಂಕೇಶರ 'ಮುಸ್ಸಂಜೆ ಕಥಾಪ್ರಸಂಗ'ದಲ್ಲಿ ಸೈಕಲ್ ಸವಾರಿ ಮಾಡುವಾಗ ತಾನೇ ಸಾವಂತ್ರಿ ಮಂಜನಿಂದ ಪ್ರಥಮ ಚುಂಬನವನ್ನು ಪಡೆಯುವುದು? ರೋಮಾಂಚನ ಮತ್ತು ಗಾಬರಿಯಲ್ಲಿ ಕೆನ್ನೆಗೆ ಬಾರಿಸುವುದು? ಸೈಕಲ್ ಎಷ್ಟೋ ಜನರ ರಸಮಿಲನದಲ್ಲಿ ಕುಂಟಣಿಯ ಪಾತ್ರವಹಿಸಿದೆ; 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಓದಬೇಕು. ಅಲ್ಲಿ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದ ಸುಂದರಾಂಗ ದೇವಯ್ಯ ಸೈಕಲ್ ಮೂಲಕವೇ ಚೆಲುವೆ ಕಾವೇರಿಯನ್ನು ಒಲಿಸಿಕೊಳ್ಳುತ್ತಾನೆ. ಭಾರತದ ಸಹಸ್ರಾರು ದುರಂತ–ಸುಖಾಂತ್ಯ ಪ್ರೇಮಕಥಾನಕಗಳ ಹಿಂದೆ ಸೈಕಲ್ಲಿನ ಕೈವಾಡವಿದೆ.



ಸೈಕಲ್ಲಿನ ಮಾಂತ್ರಿಕ ಶಕ್ತಿಗೆ ಉದಾಹರಣೆ ನಮ್ಮ ಮನೆಯಲ್ಲೇ ಸಂಭವಿಸಿತು. ಸ್ತ್ರೀಯರು ಗಂಡಸರಿಗೆ ಕಡಿಮೆಯಲ್ಲ ಎಂದು ಪ್ರತಿಪಾದಿಸುವ ಬಾನು, ತನ್ನ ನಂಬಿಕೆಗೆ ವಿರುದ್ಧವಾಗಿ ನನ್ನನ್ನು ಗುರುವೆಂದು ನಮ್ರವಾಗಿ ಒಪ್ಪಿಕೊಂಡು, ಹೈಸ್ಕೂಲು ಮೈದಾನದಲ್ಲಿ ಸೈಕಲ್ ಕಲಿತಳು; ಆಕೆ ಬಳಿಕ ಒಬ್ಬಳೇ ಮಕ್ಕಳಶಾಲೆಗೂ ಬಜಾರಿಗೂ ಹೋಗತೊಡಗಿದಳು. ಇದಾದ ಬಳಿಕವೇ ಮನೆಯಲ್ಲಿದ್ದ ನನ್ನ ಅಲ್ಪಸ್ವಲ್ಪ ಯಜಮಾನಿಕೆ ಕುಸಿದುಬಿದ್ದಿತು. ಹಳೆಯ ಹಿಂದಿ ಸಿನಿಮಾಗಳಲ್ಲಿ ಸ್ವತಂತ್ರ ಪ್ರವೃತ್ತಿಯ ಹುಡುಗಿಯರನ್ನು ಅವರು ಸೈಕಲ್ ಹೊಡೆಯುವ ದೃಶ್ಯಗಳ ಮೂಲಕ ತೋರಿಸುತ್ತಿದ್ದರು. ಈ ದೃಶ್ಯಗಳು ಅವರು ಸಾಂಸಾರಿಕ ಧರ್ಮಕ್ಕೆ ವಿರುದ್ಧವಾದವರು ಎಂದು ಕೂಡ ಸೂಚಿಸುತ್ತಿದ್ದವು. ಆದರೆ ಈ ಅರೆಸತ್ಯದ ಕಲ್ಪನೆಯನ್ನು ಭಗ್ನಮಾಡಿದವರು, ಸೀರೆಯನ್ನು ಕಚ್ಚೆಹಾಕಿ ಹ್ಯಾಂಡಲಿಗೆ ಕ್ಯಾನು ಸಿಕ್ಕಿಸಿಕೊಂಡು ಹಾಲು